

## ಬೇಲಿ ಕಟ್ಟುತ್ತೇವೆ ನಾವು

ದಲ್ಲಾಳಿ ಮಂಡಿಯಲಿ
ಸಹಕಾರಿ ಬ್ಯಾಂಕಿನಲಿ
ಚಕ್ರಬಡ್ಡಿ ಸಾಲ ತರುತ್ತೇವೆ ನಾವು
ಕರಿಮುಗಿಲ ನಂಬಿ
ಹೊಲ ಹಸನು ಮಾಡಿ
ಗೊಬ್ಬರ ಹಾಕುತ್ತೇವೆ
ಬೀಜ ಬಿತ್ತುತ್ತೇವೆ
ಬೆಳೆ ಬರಲಿ, ಬರವಿರಲಿ
ಹೊಲಕ್ಕೆ ಬೇಲಿ ಕಟ್ಟುತ್ತೇವೆ ನಾವು

ಬಿಡಾಡಿ ದನಗಳ ಹಿಂಡು
ಹೊಲಕ್ಕೆ ಬಾರದಿರಲಿ ಎಂದು
ಬೇಲಿ ಕಟ್ಟುತ್ತೇವೆ ನಾವು

ಚಳಿ, ಮಳೆ, ಗಾಳಿ, ಬಿಸಿಲಿನ ತಾಪಕ್ಕೆ
ಅಂಜುವುದಿಲ್ಲ ಅಳುಕುವುದಿಲ್ಲ
ಇವೆಲ್ಲಾ ನಾವು ಸಹಿಸಿದ್ದೇವೆ
ನೇಣಿಗೆ ಮೊರೆ ಹೋಗುವುದಿಲ್ಲ
ಬೆಳೆ, ಬೆಲೆ, ನೆಲೆ ಇಲ್ಲದ
ಬರಡು ಬಯಲು ಬದುಕಿನ
ಹೊಲಕ್ಕೆ ಬೇಲಿ ಕಟ್ಟುತ್ತೇವೆ ನಾವು.

● ಎಂ. ಬಕ್ಕೇಶ್ವರಸ್ವಾಮಿ

## ಜತೆಯಾದೆ ನೀ ಮಡದಿ

ಜತೆಯಾದೆ ನೀ ಮಡದಿ
ಧಣಿಗಳ ಬರಡು ಭೂಮಿಗೆ
ಬೇಲಿ ಹಾಕಲು, ತಂಗಳ ಕೂಳು
ಕೂತು ತಿನ್ನಲು

ಸಾಲವೆಂಬ ನದಿಯಲ್ಲಿ
ಈಜಿಬಂದು ದಡದಲ್ಲಿ
ಪುಟ್ಟ ಗುಡಿಸಿಲಲ್ಲಿ ತಂಗಲು
ಜತೆಯಾದೆ ನೀ ಮಡದಿ

ನಾ ಒಡೆಯ ನಿನ್ನ ಒಲವಿಗೆ
ಸೋತೆನು ನಾ ನಿನ್ನ ಚೆಲುವಿಗೆ
ಬರಡಾಗಿದ್ದ ಬದುಕಿಗೆ
ಜತೆಯಾದೆ ನೀ ಮಡದಿ

ಕೆಂಡದಂತಹ ನೆಲ ಕೆಳಗೆ
ಸುಡುವ ಭಾನು ನೆತ್ತಿಗೆ
ಮಳೆಯ ಸುಳಿವು ಇಲ್ಲದ ಮೇಲೆ
ನನ್ನ ಒಲವು ನಿನ್ನ ಮೇಲೆ
ಜತೆಯಾದೆ ನೀ ಮಡದಿ.

● ಯಶಸ್ವಿನಿ ಎಂ.ಎಸ್.

## ಬೇಲಿ ಕಟ್ಟುವ ಕಲೆ

ಮಳೆಯೆನ್ನದೆ ಬಿಸಿಲೆನ್ನದೆ ಅಲೆದು
ಹಗಲೆನ್ನದೆ ಇರುಳೆನ್ನದೆ ದುಡಿದು
ಬೆವರ ಧಾರೆಯನ್ನು ಸುರಿದು
ಬೆಳೆಸಿ ಕೊಯ್ದು ಹೊತ್ತು ತಂದ ಬೆಳೆ...

ನಾಲ್ಕಾರು ದಿನ ಬಿಸಿಲಲ್ಲಿ ಒಣಗಬೇಕು
ನೀರ ಪಸೆಯಾರಿ ಬೆಚ್ಚಗಾಗಬೇಕು
ಅದಕ್ಕಾಗಿಯೇ ಇಲ್ಲಿ ಹರಡಬೇಕು
ಅಂತಾದರೆ ಬೆಳೆಗೆ ಬಂದೀತು ಬೆಲೆ...
ಕತ್ತಲಲ್ಲಿ ಮೆಲ್ಲಗೆ ಕಳ್ಳ ಹಸು ನುಗ್ಗೀತು
ಹಂದಿ ನವಿಲುಗಳ ದಾಳಿಯಾದೀತು
ಕಷ್ಟದ ಬೆಳೆ ಹಾಳಾದೀತು
ಬೇಲಿಕಟ್ಟಿದರಷ್ಟೇ ಉಳಿದೀತು ಬೆಳೆ
ಅದ ಮಾಡುವುದೂ ಒಂದು ಕಲೆ.

● ಸವಿತಾ ಎಸ್. ಭಟ್